ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Saturday, the 5th August 1978/Shravana 14, 1900 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral Answers were given)

Staying of C. M. and Ministers in Govt. Bungalow even after dissolution of the Ministry.

347. SRI S. S. ARAKERI (Ballolli).—Will the Chief Minister be pleased to state.—

(*a*) whether it is a fact that the Chief Minister and some other Ministers of the previous Ministry continued to occupy the Government Bungalow even after the Ministry was dissolved on 1st January, 1978 ;

(*b*) if so, the period so occupied by such Ministers ;

(*c*) whether any rent was paid by them for the Government bungalows beyond the period allowed under Ministers' Salaries and Allowances Act, 1956 ;

(*d*) whether the rent so paid was assessed at Market rate and if so, that amount so assessed ?

SRI B. SUBBAYYA SHETTY (Minister of Education) [on behalf of SRI D. DEVARAJ URS (Chief Minister)].—

(*a*) Yes.

(*b*) Statement appended.

(*c*) Statement appended.

(*d*) The rent for the Government Bungalows was calculated on plinth area basis taking into consideration the present day cost and allowing depreciation as per rules.

Open area of the bungalows was also taken into consideration for assessing the rent. The rent was calculated at 7 per cent of the Capital cost of building. This has been done as per Standards.

STATEMENT

Showing the date of vacation of the Ex-Ministers and the rent to be paid by them for the period of over stay.

Sl. No.	Name of the Ex-Ministers	Date of vacation	No. of days overstayed	House rent and furniture rent.	Whether paid or not	Remarks
1.	Sri D. Devaraj Urs, Ex-Chief Minister	10-2-1978	26	19,654.00	Not paid	
2.	Sri H. M. Channabasappa	25-1-1978	10	3808.00	Not paid	
3.	Sri K. H. Ranganath	23-1-1978	8	1386.00	Not paid	
4.	Sri S. M. Yahya	25-1-1978	10	2117.00	Not paid	
5.	Sri R. Gundu Rao	25-1-1978	10	3809.00	Not paid	
6.	Sri S. B. Nagaral	25-1-1978	10	1270.00	Not paid	
7.	Sri H. C. Srikantaiah	25-1-1978	10	757.00	Not paid	
8.	Sri V. S. Koujalgi	25-1-1978	10	721.00	Paid	
9.	Sri Devendrappa Ghalappa	25-1-1978	10	729.00	Not paid	
10.	Sri Mallikarjuna Kharge	25-1-1978	10	768.00	Not paid	
11.	Sri R. S. Patil	3-2-1978	19	623.29	Not paid	
12.	Sri S. Bangarappa	28-1-1978	13	77.00 (furniture rent only)	Not paid	
13.	Sri Bapurao Hulsoorkar	1-5-1978	3 months 16 days.	284.00	Not paid	

ಶ್ರೀ ಎಸ್. ಎಸ್. ಅರಕೇರಿ.—ನನ್ನ 'ಆ' ಪ್ರಶ್ನೆಗೆ ಉತ್ತರವಾಗಿ ಸ್ಟೇಟ್‌ಮೆಂಟ್‌ನಲ್ಲಿ ಶ್ರೀ ದೇವರಾಜ ಅರಸ್ ಮುಖ್ಯ ಮಂತ್ರಿಗಳು ೨೬ ದಿವಸ ಓವರ್‌ಸ್ಟೇ ಮಾಡಿದರು. ಶ್ರೀ ಚನ್ನಬಸಪ್ಪನವರು ೧೦ ದಿವಸ ಓವರ್‌ಸ್ಟೇ ಮಾಡಿದರು. ಶ್ರೀ ರಂಗನಾಥ್ ಅವರು ೮ ದಿವಸ ಓವರ್‌ಸ್ಟೇ ಮಾಡಿದರು ಎಂದು ಅನುಕ್ರಮವಾಗಿ ತಾವು ಕೊಟ್ಟಿದ್ದೀರಿ. ಮುಖ್ಯ ಮಂತ್ರಿಗಳಿಂದ ಸುಮಾರು ೧೯,೬೫೪ ರೂಪಾಯಿ ಬರ ಬೇಕು ಮತ್ತು ಉಳಿದ ಮಂತ್ರಿಗಳಿಂದಲೂ ಕ್ರಮವಾಗಿ ಇಷ್ಟಿಷ್ಟು ಬರಬೇಕು ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಇದು ಸುಮಾರು ೩೬-೩೭ ಸಾವಿರ ರೂಪಾಯಿ ಆಗುತ್ತದೆ, ಇದನ್ನು ವಸೂಲು ಮಾಡಿಲ್ಲ. ಇದನ್ನು ವಸೂಲುಮಾಡಲು ಸರ್ಕಾರದವರು ಡಿಮ್ಯಾಂಡ್ ನೋಟೀಸ್ ಕಳಿಸಿದ್ದಾರೆಯೇ ?

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಇನ್ನೂ ಕೂಡ ಡಿಮ್ಯಾಂಡ್ ನೋಟೀಸ್ ಕಳಿಸಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಇದಕ್ಕೆ ಕಾರಣವೇನು ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಡಿಮಾಂಡ್ ನೋಟೀಸ್ ಕಳಿಸಿಲ್ಲ ಅಷ್ಟೆ.

ಶ್ರೀ ಎಸ್. ಆರ್. ಬೊಮ್ಮಾಯಿ. —ಯಾರಾದರೂ ಬಡರೈತ ೫೦ ರೂಪಾಯಿ ಕೊಡದೇಹೋದರೆ ಎಲೆಕ್ಟ್ರಿಸಿಟಿ ಕಟ್ ಮಾಡುತ್ತೀರಿ, ಕಂದಾಯ ಕೊಡದೇಹೋದರೆ ಮನೆ ಹರಾಜು ಮಾಡುತ್ತೀರಿ, ಕೋ-ಆಪರೇಟೀವ್ ಸೊಸೈಟಿ ಸಾಲವನ್ನು ಕೊಡದೇಹೋದರೆ ಮನೆಯಲ್ಲಿರತಕ್ಕ ಪಾತ್ರೆಗಳನ್ನೆಲ್ಲಾ ಹರಾಜು ಹಾಕಿಸುತ್ತಿದ್ದೀರಿ. ಆದರೆ ರಾಜ್ಯ ಮುಖ್ಯ ಮಂತ್ರಿಗಳಿಂದ ಮತ್ತು ಇತರೆ ಮಂತ್ರಿಗಳಿಂದ ಇಷ್ಟು ದೊಡ್ಡ ಮೊತ್ತದ ಹಣ ಬರಬೇಕಾಗಿದ್ದರೂ ಡಿಮ್ಯಾಂಡ್ ನೋಟೀಸ್ ಕಳಿಸದೇ ಇರಲಿಕ್ಕೆ ಕಾರಣವೇನು ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಸನ್ಮಾನ್ಯ ವಿರೋಧಪಕ್ಷದ ನಾಯಕರು ಕೋ-ಆಪರೇಟೀವ್ ಸೊಸೈಟಿ ಬಗ್ಗೆ ಎಲ್ಲಾ ಹೇಳಿದ್ದಾರೆ. ಕೋ-ಆಪರೇಟೀವ್ ಸೊಸೈಟಿಯಲ್ಲೂ ಕೂಡ ಇಷ್ಟು ಬೇಗ ನೋಟೀಸಾಗಲೀ ಕಳಿಸಲಿಕ್ಕಿಲ್ಲ. ಈಗ ೧೫ ದಿನ ಎಂದು ಕಟ್ಟುನಿಟ್ಟಾಗಿ ಮಾಡಿದರೆ ನಾವು ಎಲ್ಲಿಗೆ ಹೋಗಬೇಕು. ಇದು sudden ಆಗಿ bolt from the blue undemocratic way ಆಯಿತು. ನಾವು ಎಲ್ಲಿ ಹೋಗಬೇಕು, ಮನೆ ಇಲ್ಲ, ಬೆಂಗಳೂರಿನಲ್ಲಿ ಎಲ್ಲಿ ಮನೆ ಹುಡುಕಿಕೊಂಡು ಹೋಗುವುದು. ೧೫ ದಿವಸದಲ್ಲಿ ಬೇರೆ ಕಡೆಗೆ ಹೋಗಲಿಕ್ಕೆ ಆಗಲಿಲ್ಲ. Nor the Government took care to give even the houses under H. R. C. ಮನೆಗಳನ್ನು ಒದಗಿಸಿಕೊಡುವಂಥ ಸೌಜನ್ಯ ಕೂಡ ಇರಲಿಲ್ಲ. ನಾವು ಈಗ ಸರ್ಕಾರಕ್ಕೆ ಹೆಚ್. ಆರ್. ಸಿ. ಯಿಂದ ಒಂದು ಮನೆಯನ್ನಾದರೂ, ಸಣ್ಣ ರೂಮನ್ನಾದರೂ ಕೊಡಿ ಎಂದು ಬರೆದಿದ್ದೆವು. ಒಂದು ಮನೆಯನ್ನು ಕೊಡುವಂಥ ಸೌಜನ್ಯತೆ ಕೂಡ ಸರ್ಕಾರಕ್ಕೆ ಇರಲಿಲ್ಲ. We had to be overstayed. ೧೫ ದಿನ ಮಾತ್ರ ಓವರ್ ಸ್ಟೈಯ್ಡ್ ಇದ್ದೇವೆ, ಅಷ್ಟೆ. ಬಹುಶಃ ಕೋರ್ಟ್‌ನಲ್ಲಾದರೂ ಕೂಡ ಇಂತಹ ಪ್ರಸಂಗ ಬಂದರೆ ಒಂದು ತಿಂಗಳು ಅಥವಾ ಇನ್ನೂ ಹೆಚ್ಚು ಸಮಯ ಕೊಡುತ್ತಾರೆ. There is a difficulty, there is a dearth of accommodation, ಎಂದು ಅವರು ಬಿಟ್ಟುಬಿಡುತ್ತಾರೆ. ಈ ೧೫ ದಿನ ಎಂದು ಸಮಯ ಮಿತಿ ಏನಿದೆ ಅದು. It had really in a very prejudical manner. At that time we are not Ministers. ಆಗ ಯಾರೂ ಮಿನಿಸ್ಟರ್ ಆಗಿ ಇರಲಿಲ್ಲ. ಎಲ್ಲರೂ ಇದ್ದಹಾಗೆ ಇದ್ದೆವು. We were ordinary citizens. We were just as citizens as any other citizens but we also require some sort of consideration that too till we move. After all 15 days is nothing. ಇಂತಹ ಒಂದು ಸಂದರ್ಭದಲ್ಲಿ ಈ ರೀತಿ ನಡೆಯಿತು. ಈಗ ರೂಲ್ಸ್ ಏನಿದೆ ಅದರ ಪ್ರಕಾರ ಬಂದಿದೆ. But I think it has to be reconsidered in its entirety.

ಶ್ರೀ ಎಸ್. ಆರ್. ಬೊಮ್ಮಾಯಿ. – ಮಾನ್ಯ ಮಂತ್ರಿಗಳು ಉತ್ತರ ಹೇಳುವ ಬದಲು ಒಂದು ಭಾಷಣ ಮಾಡಿದರು. ನಿಮ್ಮ ಪಕ್ಷದ ಕೇಂದ್ರ ಸರ್ಕಾರ ಇದ್ದಾಗ ಮೆಜಾರಿಟಿ ಇದ್ದ ಎಷ್ಟು ಮಂತ್ರಿ ಮಂಡಲಗಳ ಮೇಲೆ ಚೆಂಡು ಹಾರಿಸಿದ್ದಾರೆ. ಅದನ್ನು ನೆನಸಿಕೊಂಡರೆ ಈ ರೀತಿಯಾಗಿ ತಾವು ಉತ್ತರ ಹೇಳುತ್ತಾ ಇರಲಿಲ್ಲ. ಎರಡನೆಯದು ಏನೆಂದರೆ, ಒಂದು ವೇಳೆ ಚುನಾವಣೆಯಲ್ಲಿ ತಾವು ಸೋತಿದ್ದರೆ

† Indicates that remarks or Speeches have not been revised by the member concerned.

ಬೇರೆ ಸರ್ಕಾರ ಬಂದಿದ್ದರೆ ಅವರು ಎಲ್ಲಿರಬೇಕಾಗಿತ್ತು? ಇಷ್ಟೇ ದಿವಸದಲ್ಲಿ ಮನೆಗಳನ್ನು ಬಿಡಬೇಕು ಎಂದು ರೂಲ್ಸ್ ಏನಿದೆ ಇದು ಇವತ್ತು ಮಾಡಿದ್ದಲ್ಲ. ಎಲ್ಲಿಯವರೆಗೆ ರೂಲ್ಸ್ ಬದಲಾವಣೆಯಾಗು ವುದಿಲ್ಲವೋ ಅಲ್ಲಿಯವರೆಗೆ ಕಾನೂನು ಬದ್ಧವಾಗಿ ಸರ್ಕಾರದಲ್ಲಿರುವವರು ನಡೆದುಕೊಳ್ಳಬೇಕಾಗುತ್ತದೆ. ೧೫ ದಿವಸ ಸಾಲದು, ೨ ತಿಂಗಳು ೩ ತಿಂಗಳಲ್ಲಿ ಬಿಡಬೇಕು ಎಂದು ಮಾಡಿ ನನ್ನ ಅಭ್ಯಂತರವಿಲ್ಲ. ಚುನಾ ವಣೆ ಆದಮೇಲೆ ಹೊಸದಾಗಿ ಬಂದ ಮಂತ್ರಿಗಳು ಎಲ್ಲಿರಬೇಕು. Supposing if it is after the General Elections, there is a change of party position, immediately the new Ministers will have to go there. Always the Minister must know that he should be ready to quit at any moment. ಕುಟುಂಬದ ತೊಂದರೆ ಇರುತ್ತದೆ. ಇಲ್ಲ ಎಂದು ಹೇಳುವುದಿಲ್ಲ. ಎಲ್ಲಿಯವರೆಗೆ ರೂಲ್ಸ್ ಇರುತ್ತದೋ ಅಲ್ಲಿಯ ವರೆಗೆ ಅದರ ಪ್ರಕಾರ ನಡೆದುಕೊಳ್ಳಬೇಕು. ಇವತ್ತು ರೂಲ್ಸ್ ಪ್ರಕಾರ ಏಷ್ಟು ಅರಿಯರ್ಸ್ ಕೊಡ ಬೇಕೋ ಅಷ್ಟು ಕೊಡಬೇಕಾಗುತ್ತದೆ. As a citizen, you are bound to pay it and you should be a model. ಅದು ಬಿಟ್ಟು ಡಿಮ್ಯಾಂಡ್ ನೋಟೀಸ್ ಕಳಿಸಿಲ್ಲ, ರೀ ಕನ್ಸಿಡರ್ ಮಾಡಬೇಕು ಎಂದರೆ ರೀ ಕನ್ಸಿಡರ್ ಮಾಡುವ ಪ್ರಶ್ನೆಯೇ ಇಲ್ಲ. ತಾವು ಅರಿಯರ್ಸ್‌ನ್ನು ಸಂಪೂರ್ಣ ವಾಗಿ ಕೊಟ್ಟು ರೂಲ್ಸ್ ಬದಲಾವಣೆ ಮಾಡಿದರೆ ಮುಂದೆ ಆ ರೀತಿ ನಡೆದುಕೊಳ್ಳುವುದಕ್ಕೆ ಆಗುತ್ತದೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ನಿಮ್ಮ ಸರ್ಕಾರ, Nobody could beat the record of your Government in the Centre. ಆ ಪ್ರಶ್ನೆ ಬೇರೆ. ಅದನ್ನು ಇಲ್ಲಿ ಹೆಚ್ಚು ಎತ್ತುವುದು ಆಗತ್ಯವಿಲ್ಲ. ಮಂತ್ರಿಗಳಾದವರು ಹೋಗಬೇಕು ಎನ್ನುವುದು ಎಲ್ಲರಿಗೂ ಗೊತ್ತಿದೆ. ಮಂತ್ರಿಗಳಾದ ವರು ಹೋಗಲಿಕ್ಕೆ ರೆಡಿ ಇದ್ದಾರೆ. When it comes in a democratic way, well, everybody is prepared. ಇಲ್ಲಿ ಮಂತ್ರಿಯಾದವರು ಹೋಗುವ ಪ್ರಶ್ನೆ ಇಲ್ಲ. ಜಿಗಿಕ್ಕೆ ಹೋಗು ವುದು ಆಗಿದೆ. ಇಲ್ಲಿ As a citizen and not as a Minister ಆ ಪ್ರಶ್ನೆ ಇರುವಂಥಾದ್ದು. ರೂಲ್ಸ್ ಬದಲಾವಣೆ ಮಾಡುವುದು ಆಗತ್ಯ ಇದೆ, ಅದನ್ನು ತಾವು ಒಪ್ಪಿಕೊಂಡಿದ್ದೀರಿ. So we will definitely think about it. We should bring the issue under the law and we will do it.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರದಿಂದಲೇ ನಮಗೆ ಟಿ.ಎ,ಡಿಎ. ಬರಬೇಕಾಗಿದೆ, ಅದನ್ನು ನಮಗೆ ಕೊಟ್ಟಿಲ್ಲ. ಅದನ್ನು ಅವರು ಇಟ್ಟುಕೊಂಡಿದ್ದಾರೆ. ಬಾಡಿಗೆ ಬಾಕಿ ಇರುವುದರಿಂದ ನಮಗೆ ಟಿಎ, ಡಿಎ, ಕೊಡದೆ ಅವರ ಹತ್ತಿರವೇ ಇದೆ. ೧೦೦೦ ಚಿಲ್ಲರೆ ಟಿ.ಎ.ಡಿ.ಎ. ನಮಗೆ ಬರಬೇಕಾಗಿದೆ, ಸರ್ಕಾರ ನಮಗೆ ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮಗೆ ಬರುವುದಿದ್ದರೆ ತೆಗದುಕೊಳ್ಳಿ. ಸರ್ಕಾರಕ್ಕೆ ಕೊಡ ತಕ್ಕಂಥಾದ್ದನ್ನು ಕೊಡಬೇಕು. ಕಾನೂನು ಬದ್ಧವಾಗಿ ಹಣ ತುಂಬಲಿಕ್ಕೆ ನೋಟೀಸ್ ಕೊಟ್ಟಿದ್ದೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಪಿ. ಡಬ್ಲ್ಯು. ಡಿ. ಯವರು ಸರ್ಟಿಫಿಕೇಟ್ ಕೊಡಬೇಕು. ನವ-ಗೆ ಬರುವುದು ಬಾಕಿ ಇರುವುದರಿಂದ ಅವರು ಸರ್ಟಿಫಿಕೇಟ್ ಕೊಡಲಿಲ್ಲ. ನಮಗೆ ಬರಬೇಕಾದ ದುಡ್ಡೂ ಬಂದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಮಾರುಕಟ್ಟೆ ರೇಟ್ ಪ್ರಕಾರ ಬಾಡಿಗೆಯನ್ನು ಗೊತ್ತುಮಾಡಿದ್ದೀರಾ ಎಂದು ನಾನು ಕೇಳಿದರೆ, the rent for the Government Bungalows was calculated on plinth area basis taking into consideration the present day cost and allowing depriciation as per rules ಎಂದು ಹೇಳಿದ್ದೀರಿ. ಹಾಗಾದರೆ ಪ್ರೈವೇಟ್ ಮನೆಗಳಿಗೆ ಮಾರ್ಕೆಟ್ ರೇಟ್ ಪ್ರಕಾರ ರೆಂಟ್ ನಿಗದಿ ಮಾಡುವಾಗ ಈ ಬೇಸಿಸ್ ತೆಗೆದುಕೊಳ್ಳುವುದಿಲ್ಲ. Present day cost, standard of living ನೋಡಿಕೊಂಡು ಮಾಡುತ್ತಾರೆ. ಆದುದರಿಂದ ಇದನ್ನು ಪುನರಾಲೋಚನೆ ಮಾಡಿ ವಸೂಲು ಮಾಡುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ತಮ್ಮ ನಾಯಕರು ಈಗಿನ ರೂಲ್ ಪ್ರಕಾರ ನೋಡಿ ಎಂದು ಹೇಳಿದರು, ತಾವು ಇದನ್ನು ಬದಲಾವಣೆ ಮಾಡಿ ಎಂದು ಹೇಳುತ್ತಿದ್ದೀರಿ, ಇದನ್ನು ಸಮಗ್ರವಾಗಿ ಚಿಂತನೆ ಮಾಡೋಣ,